ಕ್ಷಣ ಕ್ಷಣದ ಸುದ್ದಿಗಾಗಿ
ವಿಶ್ವವಾಣಿ timely ಆ್ಯಪ್ ಡೌನ್‌ಲೋಡ್ ಮಾಡಿ

ಸಂಪಾದಕೀಯ

ಸಹಮತದ ಕೊರತೆ

ಪೊಲೀಸ್ ಇಲಾಖೆಯಲ್ಲಿ ರಾಜಕೀಯ ಹಸ್ತಕ್ಷೇಪ ಕುರಿತು ಕರ್ನಾಟಕ ಐಪಿಎಸ್ ಅಧಿಕಾರಿಗಳ ಸಂಘದ ಅಧ್ಯಕ್ಷ ಹಾಗೂ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ (ಎಡಿಜಿಪಿ) ಆರ್.ಪಿ. ಶರ್ಮಾ ರಾಜ್ಯ ಸರಕಾರಕ್ಕೆ ಪತ್ರ ಬರೆದಿರುವುದು ವಿವಾದ ಸೃಷ್ಟಿಸಿದೆ. ರಾಜಕಾರಣಿಗಳ ಒತ್ತಡದಿಂದಾಗಿ ಪೊಲೀಸರ ನೈತಿಕ ಸ್ಥೈರ್ಯ ಮತ್ತು ವೃತ್ತಿಪರತೆ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತಿದೆ. ಅವರು ಪ್ರಾಮಾಣಿಕವಾಗಿ ಕೆಲಸ ನಿರ್ವಹಣೆ ಮಾಡಲು ಸಾಧ್ಯವಾಗುತ್ತಿಲ್ಲ ಎಂಬುದು ಮುಖ್ಯ ಕಾರ್ಯದರ್ಶಿ ರತ್ನಪ್ರಭಾ ಅವರಿಗೆ ಶರ್ಮಾ ಬರೆದಿರುವ ಪತ್ರದ ಸಾರಾಂಶ. ಶರ್ಮಾ ಆರೋಪದಲ್ಲಿ ಹುರುಳಿಲ್ಲದೆ ಏನಿಲ್ಲ. ಉದ್ಯಮಿ ಪುತ್ರ ವಿದ್ವತ್ ಮೇಲೆ ಶಾಸಕ ಹ್ಯಾರಿಸ್ ಪುತ್ರ ನಲಪಾಡ್ ಗುಂಪಿನ ಹಲ್ಲೆ, ಮೈಸೂರಿನಲ್ಲಿ ಐಪಿಎಸ್ ಅಧಿಕಾರಿ ರಶ್ಮಿ ಮೇಲೆ ರಾಜಕೀಯ ಪ್ರೇರಿತ ಗೂಂಡಾಗಳ ಹಲ್ಲೆ, ತಮ್ಮ ಮೇಲೆ ಹಲ್ಲೆ ಹಾಗೂ ಕರ್ತವ್ಯಕ್ಕೆ ಅಡ್ಡಿಪಡಿಸಿದವರ ಮೇಲೆ ಮೈಸೂರು ಡಿಸಿ ಶಿಖಾ ಎಫ್‌ಐಆರ್ ದಾಖಲಿಸಲು ತಿಣುಕಾಡಿದ್ದು ಮತ್ತಿತರ ಪ್ರಕರಣಗಳು ಶರ್ಮಾ ಆರೋಪಕ್ಕೆ ಕೆಲ ನಿದರ್ಶನಗಳು. ಹಲ್ಲೆಗೆ ಒಳಗಾದ ವಿದ್ವತ್ ವಿರುದ್ಧವೇ ಕೇಸು ದಾಖಲಿಸಲು ಪೊಲೀಸರು ಮುಂದಾಗಿದ್ದರ ಹಿಂದೆ ಕೆಲಸ ಮಾಡಿದ್ದ ರಾಜಕೀಯ ಒತ್ತಡವೇ. ಅದೇ ರೀತಿ ವಿದ್ವತ್ ಆಸ್ಪತ್ರೆಯಿಂದ ಬಿಡುಗಡೆ ಕುರಿತ ವೈದ್ಯ ವರದಿ ಅವರ ಪೋಷಕರಿಗಿಂತ ಮೊದಲು ಆರೋಪಿ ಪರ ವಕೀಲರ ಕೈಸೇರುವಲ್ಲಿ ಕೆಲಸ ಮಾಡಿರುವುದು ಇದೇ ರಾಜಕೀಯ ಒತ್ತಡವೇ. ಈ ಬಗ್ಗೆ ನ್ಯಾಯಾಲಯವೇ ಆರೋಪಿ ಪರ ವಕೀಲರನ್ನು ತರಾಟೆಗೆ ತೆಗೆದುಕೊಂಡಿದೆ. ಹೀಗಾಗಿ ಶರ್ಮಾ ಆರೋಪದ ಹಿಂದೆ ಸತ್ಯ ಇರುವುದನ್ನು ತಳ್ಳಿ ಹಾಕುವಂತಿಲ್ಲ. ಆದರೆ ಅದೇ ಶರ್ಮಾ ಸರಕಾರಕ್ಕೆ ಪತ್ರ ಬರೆಯಲು ಐಪಿಎಸ್ ಅಧಿಕಾರಿಗಳ ಸಂಘದ ಲೆಟರ್‌ಹೆಡ್ ಅನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂಬ ಆರೋಪ ಬಂದಿದೆ. ಈ ರೀತಿ ಆರೋಪ ಮಾಡಿರುವವರು ಬೇರೆ ಯಾರೂ ಅಲ್ಲ. ಶರ್ಮಾ ಅಧ್ಯಕ್ಷರಾಗಿರುವ ಸಂಘದ ಇತರೆ ಪದಾಧಿಕಾರಿಗಳಿಂದ. ಅಂದರೆ ಶರ್ಮಾ ಮಾಡಿರುವ ವಿಚಾರದಲ್ಲಿ ಐಪಿಎಸ್ ಅಧಿಕಾರಿಗಳ ವಲಯದಲ್ಲೇ ಸಹಮತ ಇಲ್ಲ ಎಂದಂತಾಯಿತು. ಇದು ರಾಜಕೀಯ ಹಸ್ತಕ್ಷೇಪಕ್ಕಿಂತಲೂ ಮಿಗಿಲಾಗಿ ಪರಿಗಣಿಸಬೇಕಾದ ಗಂಭೀರ ಅಂಶ. ವ್ಯವಸ್ಥೆಯಲ್ಲಿನ ಲೋಪಕ್ಕೆ ಪರಿಹಾರ ಕಂಡು ಹಿಡಿಯುವಲ್ಲಿ ಸಂಘಟಿತ ಪ್ರಯತ್ನ ಮುಖ್ಯ. ಆದರೆ ಐಪಿಎಸ್ ಅಧಿಕಾರಿಗಳ ಸಂಘದಲ್ಲಿರುವ ಈ ಕೊರತೆ ಶರ್ಮಾ ಆರೋಪದ ಹಿಂದೆಯೂ ರಾಜಕೀಯ ಕಾರಣಗಳನ್ನು ಹುಡುಕುವಂತೆ ಮಾಡಿದೆ. ಅದೂ ಚುನಾವಣೆ ಸಮೀಪಿಸಿರುವ ಈ ಸಂದರ್ಭದಲ್ಲಿ, ಇದು ಕೂಡ ವಿಪರ್ಯಾಸವೇ!

ರೈತ ಶಕ್ತಿಯ ಅನಾವರಣ

ಮಹಾರಾಷ್ಟ್ರದಲ್ಲಿ ಅನ್ನದಾತರ ಬೃಹತ್ ಪ್ರತಿಭಟನೆ ಕೊನೆಗೂ ಅಂತ್ಯಗೊಂಡಿದೆ. ಕಳೆದ ಆರರಂದು ನಾಶಿಕ್‌ನಿಂದ ಆರಂಭವಾದ ಜಾಥಾ ಸೋಮವಾರದಂದು ಮುಂಬಯಿಯಲ್ಲಿ ಕೊನೆಗೊಂಡಿದೆ. ತಮ್ಮ ಹಕ್ಕಿಗಾಗಿ ರೈತರು ನಡೆಸಿದ ಶಿಸ್ತಿನ ಜಾಥಾ, ತೋರಿದ ಸ್ಥೈರ್ಯ, ಹೋರಾಟದ ಕಾವಿಗೆ ದೇವೇಂದ್ರ ಫಡ್ನವಿಸ್ ಸರಕಾರ ಮಣಿದಿದೆ. ಒಂದು ವಾರ ಇಡೀ ಮಹಾರಾಷ್ಟ್ರವನ್ನು ತುದಿಗಾಲ ಮೇಲೆ ನಿಲ್ಲಿಸಿದ್ದ ರೈತರ ಪ್ರತಿಭಟನೆ ಕೊನೆಗೂ ಸರಕಾರದ ಕಿವಿ ಹಿಂಡಿ ತಮ್ಮ ಬೇಡಿಕೆ ಈಡೇರಿಸಿಕೊಳ್ಳುವಲ್ಲಿ ಸಫಲವಾಗಿದೆ. ಕಳೆದ ವರ್ಷ ಜೂನ್ ತಿಂಗಳಿನಲ್ಲಿ ಮಧ್ಯಪ್ರದೇಶದಲ್ಲಿ ನಡೆದ ರೈತ ಪ್ರತಿಭಟನೆ ಸುಮಾರು 11 ದಿನಗಳವರೆಗೆ ನಿರಂತರವಾಗಿ ಸಾಗಿ ಶಿವರಾಜ್ ಸಿಂಗ್ ಚೌಹಾಣ್ ಸರಕಾರಕ್ಕೆ ಬಿಸಿ ಮುಟ್ಟಿಸಿತ್ತು. ಪರಿಸ್ಥಿತಿ ಕೈಮೀರುತ್ತಿರುವುದನ್ನು ಅರಿತ ಮುಖ್ಯಮಂತ್ರಿ ಚೌಹಾಣ್ ಖುದ್ದಾಗಿ ರೈತರ ಬಳಿ ತೆರಳಿ ಅವರ ಬೇಡಿಕೆಗಳನ್ನು ಈಡೇರಿಸುವ ವಾದಾ ನೀಡಿದ ಬಳಿಕವಷ್ಟೇ ಪರಿಸ್ಥಿತಿ ತಿಳಿಯಾಗಿತ್ತು. ಇನ್ನು ಮಹಾರಾಷ್ಟ್ರದಲ್ಲಿ ಕಳೆದ ಆಗಸ್ಟ್ ತಿಂಗಳಲ್ಲಿ ಸಾಲಮನ್ನಾ ವಿಷಯವಾಗಿ ಸರಕಾರದ ಅನಾದರ ಧೋರಣೆ ಖಂಡಿಸಿ ಹಲವು ದಿನಗಳ ಕಾಲ ರೈತರು ಬೀದಿಗಿಳಿದು ಪ್ರತಿಭಟಿಸಬೇಕಾಯಿತು. ಪ್ರತಿಭಟನೆಯ ಬಿಸಿಗೆ ಬೆಚ್ಚಿ ಫಡ್ನವಿಸ್ ಸರಕಾರ ಸಾಲ ಮನ್ನಾ ಘೋಷಿಸಿತ್ತು. ಇದೇ ರೀತಿ ರಾಜಾಸ್ಥಾನ, ತಮಿಳುನಾಡಿನಲ್ಲಿ ಸಹ ರೈತರು ಜೋರು ಪ್ರತಿಭಟನೆ ನಡೆಸಿದ್ದರು. ಇದೀಗ ಮಹಾರಾಷ್ಟ್ರದ ರೈತರು ಮತ್ತು ಅರಣ್ಯಗಳಲ್ಲಿ ಒಕ್ಕಲು ಮಾಡುವ ಬುಡಕಟ್ಟು ಜನ ತಮ್ಮ ವಿವಿಧ ಹಕ್ಕುಗಳಿಗಾಗಿ ಬೀದಿಗೆ ಬಂದಿದ್ದರು. ಜನಾಂದೋಲನಗಳನ್ನು ಹತ್ತಿಕ್ಕಲು ಆಡಳಿತಶಾಹಿ ನಾನಾ ತಂತ್ರಗಳನ್ನು ಮಾಡುತ್ತದೆ.

ಸ್ವತಃ ಮಹಾರಾಷ್ಟ್ರ ಮುಖ್ಯಮಂತ್ರಿ ಫಡ್ನವಿಸ್ ಪ್ರತಿಭಟನೆಯ ದಿಕ್ಕು ತಪ್ಪಿಸಲು ನೋಡಿದ್ದರು. ಪ್ರತಿಭಟನೆಗೆ ಬಂದಿರುವವರು ರೈತರೇ ಅಲ್ಲ ಅವರು ಬುಡಕಟ್ಟು ಜನರಷ್ಟೇ ಎಂದು ವಿಧಾನಸಭೆಯಲ್ಲಿಯೇ ಆರೋಪಿಸಿದ್ದರು. ಇದೇ ರೀತಿ ಬಿಜೆಪಿಯ ಪ್ರಮುಖರು ಪ್ರತಿಭಟನೆಗೆ ಬಂದವರನ್ನು ನಗರವಾಸಿ ನಕ್ಸಲರು ಎಂದು ಟೀಕಿಸಿದ್ದರು. ಆದರೆ ರೈತರು ಇದಾವುದಕ್ಕೂ ಜಗ್ಗದೇ ಪ್ರತಿಭಟನೆ ಮುಂದುವರಿಸಿದರು ಮಾತ್ರವಲ್ಲದೇ ಯಾವುದೇ ರೀತಿಯ ಪ್ರಚೋದನೆಗೆ ಒಳಗಾಗದೇ ಕೇವಲ ತಮ್ಮ ಹಕ್ಕಿನ ಪ್ರತಿಪಾದನೆಗೆ ಮುಂದಾಗಿದ್ದು ಸರಕಾರದ ಕೈ ಕಟ್ಟಿಹಾಕಿತು. ಜನರಿಂದಲೇ ರೂಪಿತವಾಗುವ ಸರಕಾರಗಳು ಜನದನಿಗೆ ಕಿವಿಗೊಡದೆ ಅನ್ಯ ಮಾರ್ಗವೇ ಇಲ್ಲ ಎಂಬುದನ್ನು ಮಹಾರಾಷ್ಟ್ರದ ರೈತರು ನಿರೂಪಿಸಿದ್ದಾರೆ.

ಚಿತ್ರಸ್ಫೂರ್ತಿ

ನಂಬಿಕೆಗಳು ಗುಡ್ಡವನ್ನೇ ಅಲ್ಲಾಡಿಸಬಹುದು. ಆದರೆ ಅನುಮಾನಗಳು ನಮ್ಮೆದುರು ಗುಡ್ಡವನ್ನೇ ಸೃಷ್ಟಿಸುತ್ತದೆ.

ಕಾಕಾ ಹೋಟ್ಲು


ಧೀರು
ಬಿಜೆಪಿಯ ಯಡಿಯೂರಪ್ಪ, ಕಾಂಗ್ರೆಸ್‌ನ ಶಾಮನೂರು ಶಿವಶಂಕರಪ್ಪ ಒಟ್ಟಿಗೆ ಊಟ ಮಾಡಿದ್ರಂತೇ?
'ಉಣ್ಣೋ' ವಿಚಾರದಲ್ಲಿ ರಾಜಕಾರಣಿಗಳಿಗೆ ಪಕ್ಷಬೇಧ ಇರಾಕಿಲ್ಲ ಕಣ್ಲಾ!
ಸುಧೀರು

ಆತನ ಪ್ರತಿಮೆ ಇದ್ದರೂ, ಇಲ್ಲದಿದ್ದರೂ ಅಪ್ರಸ್ತುತನಾಗಿದ್ದಾನೆ

ಚಕ್ರವ್ಯೂಹ

ರೋಹಿತ್ ಚಕ್ರತೀರ್ಥ

ಲೇಖಕರು, ಅಂಕಣಕಾರರು

ಈಶಾನ್ಯ ರಾಜ್ಯ ತ್ರಿಪುರದಲ್ಲಿ ಕಮಲ ಪಕ್ಷದ ಬಾವುಟ ಅರಳಿದ ಬೆನ್ನಿಗೇ ಅಲ್ಲಿನ ಬೆಲೋನಿಯಾದ ಹೃದಯಭಾಗದಲ್ಲಿದ್ದ ಲೆನಿನ್ ಪ್ರತಿಮೆ ಧರೆಗುರುಳಿತು. ಆ ಮೂರ್ತಿಯನ್ನು ಕೆಡವಿ ಉರುಳಿಸುತ್ತಿದ್ದಂತೆಯೇ ಕಮ್ಯುನಿಸ್ಟ್ ಕಾಕಗಳು ದೇಶಾದ್ಯಂತ ಕಾಕಾ ಎಂದು ಅರಚಾಡತೊಡಗಿದವು. ಬಹುಶಃ ಪರಿಸ್ಥಿತಿ ಐದು ವರ್ಷಗಳ ಹಿಂದೆ ಇದ್ದಂತಿದ್ದರೆ ಅವು ಮತ್ತೊಮ್ಮೆ ಅಸಹಿಷ್ಣುತೆಯ ವಿಷಗಾಳಿ ಹಬ್ಬಿಸಿ, ಭಾರತದಲ್ಲಿ ಕೋಲಾಹಲವಾಗುತ್ತಿದೆಯೆಂಬ ಸುದ್ದಿಯನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹರಡುತ್ತಿದ್ದವೋ ಏನೋ. ಆದರೆ, ಪರಿಸ್ಥಿತಿ ಅದೃಷ್ಟವಶಾತ್ ಬದಲಾಗಿದೆ. ಕಮ್ಮಿನಿಷ್ಠರ ನಿಜಬಣ್ಣ ದೇಶಕ್ಕೆ ಗೊತ್ತಾಗಿದೆ. ಮಾರ್ಕ್ಸ್ ಮತ್ತು ಅವನ ಸಿದ್ಧಾಂತದಂತೆ ಲೆನಿನ್, ಸ್ಟಾಲಿನ್, ನಂಬೂದಿರಿಪಾಡ್, ಸೀತಾರಾಮ ಯಚೂರಿ ಎಲ್ಲರೂ ಅಪ್ರಸ್ತುತರಾಗಿ ಮಕಾಡೆ ಮಲಗಿದ್ದಾರೆ. ಕಳೆದ ವರ್ಷದ ಅಕ್ಟೋಬರ್‌ನಲ್ಲಿ, ಅಕ್ಟೋಬರ್ ಕ್ರಾಂತಿಗೆ ನೂರು ವರ್ಷವಾದ ಸಂದರ್ಭದಲ್ಲಿ ರಷ್ಯದಲ್ಲೇ ಅದನ್ನು ಆಚರಿಸಲು ಯಾರಿಗೂ ಉತ್ಸಾಹ ಇರಲಿಲ್ಲ. ಸೋವಿಯೆಟ್ ರಷ್ಯದ ಭಿಕ್ಷೆಯಿಂದಲೇ ಬದುಕುತ್ತಿದ್ದ ಭಾರತದ ಕಮ್ಮಿನಿಷ್ಠರು ಅಕ್ಟೋಬರ್ ಕ್ರಾಂತಿಯ ಶತಮಾನೋತ್ಸವ ಆಚರಿಸಲು ಫಂಡಿಂಗ್ ಇಲ್ಲದೆ, ತಮ್ಮ ಕೈಯಿಂದ ಹಾಕಲು ಜಿಪುಣತನ ಬಿಡದೆ ಅಂತೂ ಕುಂಯ್‌ಕುಂಯ್ ಅನ್ನುತ್ತ ಕೈ ಕೈ ಹಿಸುಕಿಕೊಳ್ಳುತ್ತ ಹೇಗೋ ತಿಂಗಳು ಕಳೆಯಬೇಕಾಯಿತು. ಒಂದಷ್ಟು ಕಮ್ಯುನಿಸ್ಟ್ ಪತ್ರಕರ್ತರು ಲೆನಿನ್ ಪ್ರತಿಮೆ ಭಗ್ನ ಪ್ರಕರಣವನ್ನು ಜಗತ್ತಿನ ಪ್ರಳಯವಾಯಿತೆಂಬಂತೆ ಬರೆದುಕೊಂಡದ್ದನ್ನು ಬಿಟ್ಟರೆ ಮಿಕ್ಕವರಿಗೆ ಯಾರಿಗೂ ಅದೊಂದು ಮಹತ್ವದ ಪ್ರಕರಣ ಎನ್ನಿಸಲೇ ಇಲ್ಲ.

ಅತ್ತ ಲೆನಿನ್ ನೆಲಕ್ಕುರುಳಿದ ಹಾಗೆಯೇ ಮುಂದೊಂದು ದಿನ ತಮಿಳುನಾಡಿನಲ್ಲಿ ಪೆರಿಯಾರ್ ಕೂಡ ಉರುಳಬಹುದು – ಎಂದು ಬಿಜೆಪಿಯ ರಾಷ್ಟ್ರೀಯ ಕಾರ್ಯದರ್ಶಿ ಎಚ್. ರಾಜಾ ಫೇಸ್‌ಬುಕ್‌ನಲ್ಲಿ ಬರೆದುಕೊಂಡರು. ಅದಕ್ಕೆ ಸರಿಯಾಗಿ ತಮಿಳುನಾಡಿನ ವೆಲ್ಲೂರಿನಲ್ಲಿ ಇಬ್ಬರು ಯುವಕರು ಪೆರಿಯಾರ್ ವಿಗ್ರಹಕ್ಕೆ ಊನ ಮಾಡುವ ಕೆಲಸವನ್ನೂ ಮಾಡಿಬಿಟ್ಟರು. ಹಾಗೆ ಮಾಡಿದ್ದವರು ಕುಡಿದ ಅಮಲಿನಲ್ಲಿದ್ದರಂತೆ. ಒಬ್ಬ ಬಿಜೆಪಿಯ ಕಾರ್ಯಕರ್ತನಾದರೆ ಇನ್ನೊಬ್ಬ ಸಿಪಿಐ ಕಾರ್ಯಕರ್ತನಂತೆ. ಪೆರಿಯಾರ್ ಭಜನೆ ಮಾಡುವ ಮಂದಿಗೆ ಅಷ್ಟೇ ಸಾಕಾಯಿತು ನೋಡಿ! ಬಿಜೆಪಿಯ ರಾಜ್ಯಕಚೇರಿಯ ಒಳಗೆ ಪೆಟ್ರೋಲ್ ಬಾಂಬ್ ಎಸೆದರು. ದೇವಸ್ಥಾನದಿಂದ ಹೊರಬರುತ್ತಿದ್ದ ಹತ್ತು–ಹನ್ನೆರಡು ಬ್ರಾಹ್ಮಣರನ್ನು ಹಿಡಿದೆಳೆದು ಅವರ ಜನಿವಾರ ಕತ್ತರಿಸಿದರು. ಓರ್ವ ಅರ್ಚಕನ ಶಿಖೆಗೇ ಕತ್ತರಿಬಿತ್ತು. ಅಷ್ಟೆಲ್ಲ ಆಗಿ ಪೆರಿಯಾರ್‌ಗೆ ಜಯವಾಗಲಿ ಎಂದು ಘೋಷಣೆ ಕೂಗುತ್ತ ಮಾಯವಾದರು ಕಿಡಿಗೇಡಿಗಳು. ತಮ್ಮ ತಟ್ಟೆಯಲ್ಲಿ ಹೆಗ್ಗಣ ಬಿದ್ದವರು ಇನ್ನೊಬ್ಬರ ಎಲೆಯ ನೊಣದ ಬಗ್ಗೆ ಟ್ವೀಟ್ ಮಾಡಿದರಂತೆ. ಹಾಗೆ ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ, ತನ್ನ ರಾಜ್ಯದಲ್ಲಿ ಇದುವರೆಗೆ ಸತ್ತಿರುವ – ಇನ್ನೂ ಸಾಯುತ್ತಿರುವ 4,000ಕ್ಕೂ ಅಧಿಕ ರೈತರ ಹೆಣ ಎದುರಿಟ್ಟುಕೊಂಡು ಪೆರಿಯಾರ್ ಪ್ರತಿಮೆಯ ಪರವಾಗಿ ಟ್ವೀಟ್ ಬ್ಯಾಟಿಂಗ್ ಶುರುಮಾಡಿದರು! ಕಾಂಗ್ರೆಸ್ ವಕ್ತಾರ ರಣದೀಪ್ ಸಿಂಗ್ ಸುರ್ಜೆವಾಲ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಪೆರಿಯಾರ್ ಪ್ರತಿಮೆಯನ್ನು ಬಿಜೆಪಿ ನಾಯಕರು ಭಗ್ನಗೊಳಿಸಿದ್ದಾರೆ. ಇದು ಬಿಜೆಪಿಯ ದಲಿತವಿರೋಧಿ, ಬಡವರ ವಿರೋಧಿ ಮತ್ತು ಮಹಿಳಾವಿರೋಧಿ ಮನಸ್ಥಿತಿಯನ್ನು ತೋರಿಸುತ್ತದೆ ಎಂದೂ ಬರೆದರು! ಪೆರಿಯಾರ್ ಬಡವನಾಗಿರಲಿಲ್ಲ; ಶ್ರೀಮಂತ ಮನೆತನದಲ್ಲಿ ಹುಟ್ಟಿದ್ದ. ಆತ ದಲಿತನೂ ಆಗಿರಲಿಲ್ಲ; ನಾಯ್ಕರ್ ಎಂಬ ಬಲಿಷ್ಠ ಕೋಮಿನಲ್ಲೇ ಹುಟ್ಟಿದ್ದ. ಬಂಗಾಳದ ಠಾಕೂರರಿಗೆ ಸಮಾನವಾದ ನಾಯ್ಕರ್ ಅಥವಾ ಬಲಿಜ ಸಮುದಾಯದವರು ತಂಜಾವೂರನ್ನು ಹಲವು ಶತಮಾನಗಳ ಕಾಲ ಆಳಿದವರು ಕೂಡ. ಇನ್ನು ಪೆರಿಯಾರ್, ಸುರ್ಜೆವಾಲ ಭಾವಿಸಿದಂತೆ ಮಹಿಳೆ ಖಂಡಿತ ಆಗಿರಲಿಲ್ಲ! ಸಿದ್ದರಾಮಯ್ಯ ಮತ್ತು ಸುರ್ಜೆವಾಲರಂಥ ರಾಜಕಾರಣಿಗಳು ತಮ್ಮ ಅಜ್ಞಾನವನ್ನು ಸಾಮಾಜಿಕ ಜಾಲತಾಣದಲ್ಲಿ ಪ್ರದರ್ಶಿಸಲು ಉತ್ಸಾಹ ತೋರುವ ಮೊದಲು ಇತಿಹಾಸವನ್ನು ಸ್ವಲ್ಪ ಸರಿಯಾಗಿ ತಿಳಿದುಕೊಳ್ಳಬಾರದಿತ್ತೆ?

ಯಾರು ಈ ಪೆರಿಯಾರ್? ಈತನ ಹೆಸರು ಇ.ವಿ. ರಾಮಸ್ವಾಮಿ ನಾಯ್ಕರ್. ಸಂಕ್ಷಿಪ್ತವಾಗಿ ಇವಿಆರ್. ಹುಟ್ಟಿದ್ದು ತೆಲುಗಿನ ನಾಯ್ಕರ್ ಅಥವಾ ಬಲಿಜ ಸಮುದಾಯದಲ್ಲಿ. ಶಾಲೆ ಕಲಿಯಲು ಹೋದವನು ಅಲ್ಲೇನೋ ಭಾನಗಡಿ ಮಾಡಿ ಶಾಲೆ ತ್ಯಜಿಸಿದ. ವರ್ತಕರಾಗಿದ್ದ ತಂದೆಗೆ ಸಹಾಯ ಮಾಡಲೆಂದು ಹನ್ನೆರಡನೇ ವಯಸ್ಸಿನಲ್ಲಿ ಆಯವ್ಯಯದ ಪುಸ್ತಕ ಹಿಡಿದ. ಆದರೆ ಪೆರಿಯಾರ್‌ನದ್ದು ಬಾಲ್ಯದಿಂದಲೂ ಜಗಳಗಂಟ ಸ್ವಭಾವ. ಯಾರೊಂದಿಗೂ ಸಾಮರಸ್ಯದಿಂದ ನಾಲ್ಕು ದಿನ ಜೊತೆಗಿದ್ದ ಉದಾಹರಣೆಯೇ ಇಲ್ಲ. ತಂದೆಯೊಂದಿಗೆ ಜಗಳಾಡಿಕೊಂಡು ಕಾಶಿಗೆ ಹೋದ. ಅಲ್ಲಿ ಬ್ರಾಹ್ಮಣರಿಗೆ ಮೀಸಲಾಗಿದ್ದ ವಸತಿಗೃಹವೊಂದರಲ್ಲಿ, ತಾನೂ ಜನಿವಾರ ಹಾಕಿಕೊಂಡು ಬ್ರಾಹ್ಮಣನೆಂದು ಬಿಂಬಿಸಿ ಊಟ ಗಿಟ್ಟಿಸಲು ಯತ್ನಿಸಿದಾಗ, ಈತನ ಜಾತಿಯ ಬಗ್ಗೆ ಅನುಮಾನ ಬಂದು ಅವರು ಈತನನ್ನು ಊಟವಿಕ್ಕದೆ ಹೊರಕಳಿಸಿದರಂತೆ. ಆ ಛತ್ರವನ್ನು ಕಟ್ಟಿಸಿದ್ದು ದಕ್ಷಿಣ ಭಾರತದ ಒಬ್ಬ ಧನಿಕ ಸೆಟ್ಟಿ ಎಂದು ಸಂಶೋಧನೆ ಮಾಡಿದ ರಾಮಸ್ವಾಮಿಗೆ ಅಷ್ಟೇ ಸಾಕಾಯಿತು, ಇಡಿಯ ಬ್ರಾಹ್ಮಣ ಕುಲವನ್ನು ದ್ವೇಷಿಸಲು! ಕೆಲವೊಮ್ಮೆ ತಮ್ಮ ಗಂಡಂದಿರ ಜೊತೆ ಬಾಳಲಾಗದವರು ಪುರುಷದ್ವೇಷಿ ಸ್ತ್ರೀವಾದಿಗಳಾಗುತ್ತಾರಲ್ಲ; ಹಾಗೆ, ತನ್ನನ್ನು ಊಟ ಹಾಕದೆ ಹೊರಕಳಿಸಿದ ಛತ್ರದ ಮೇಲಿನ ದ್ವೇಷವೇ ರಾಮಸ್ವಾಮಿಗೆ ಬ್ರಾಹ್ಮಣ ಕುಲದ ಮೇಲೇ ದ್ವೇಷ ಹುಟ್ಟಲು ಕಾರಣವಾಗಿಬಿಟ್ಟಿತು! ಕಾಶಿಯಿಂದ ವಾಪಸ್ ಬಂದ. ಕಾಂಗ್ರೆಸ್ ಸೇರಿದ. ಅಲ್ಲಿಯೂ ಬ್ರಾಹ್ಮಣರಿದ್ದಾರೆ, ಅವರೇ ಪಕ್ಷದ ಬಹುತೇಕ ನಿರ್ಧಾರಗಳನ್ನೆಲ್ಲ ನಿಯಂತ್ರಿಸುತ್ತಿದ್ದಾರೆ ಎಂಬ ಕಾರಣಕ್ಕೆ ಕಾಂಗ್ರೆಸ್‌ನಿಂದ ಈಚೆ ಬಂದ. ಹಾಗೆ ಹೊರಬಂದವನಿಗೆ ಹೊಸದೊಂದು ಕ್ರಾಂತಿ ಮಾಡಬೇಕಿತ್ತು. ಆಗ ಕ್ರಾಂತಿಯ ಯುಗ ನೋಡಿ! ಹಾಗೆ ತನ್ನದೇ ಚಳವಳಿ ಹುಟ್ಟುಹಾಕಬೇಕು; ತನ್ನ ಹೆಸರನ್ನು ಇತಿಹಾಸದ ಪುಸ್ತಕದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂಥ ಕೆಲಸ ಮಾಡಬೇಕು ಎಂಬ ಹುಚ್ಚು ಹತ್ತಿದ್ದವನಿಗೆ ಹೊಸತೊಂದು ಅಸ್ಮಿತೆ ಗಳಿಸಬೇಕಾಗಿತ್ತು. ಅದಕ್ಕಾಗಿ ಬ್ರಾಹ್ಮಣ ವಿರೋಧಿ ಚಳವಳಿ ಪ್ರಾರಂಭಿಸಿದ. ದ್ರಾವಿಡ – ಆರ್ಯ ಎಂಬ ಭಿನ್ನತೆ ಸೃಷ್ಟಿಸಿದ. ಕಾಲ್ಡ್‌ವೆಲ್ ಎಂಬ ಮಿಷನರಿಯೊಬ್ಬ ಶತಮಾನದ ಹಿಂದೆ ತಮಿಳರ ಮನಸ್ಸಿನಲ್ಲಿ ಊರಿದ್ದ ದ್ರಾವಿಡದೇಶದ ಬೀಜವನ್ನು ರಾಮಸ್ವಾಮಿ ನೀರು ಹಾಕಿ ಮೊಳಕೆ ಬರಿಸಿ ಹೆಮ್ಮರವಾಗಿಸಿದ. ಆರ್ಯ ಎಂದರೆ ಬ್ರಾಹ್ಮಣ. ಆರ್ಯರನ್ನು ದ್ವೇಷಿಸುವುದೆಂದರೆ ಬ್ರಾಹ್ಮಣರನ್ನು ದ್ವೇಷಿಸುವುದು ಎಂಬುದು ಈ ಬುದ್ಧಿವಂತನ ಸರಳ ಸಮೀಕರಣ. ಹಾವು ಮತ್ತು ಬ್ರಾಹ್ಮಣ – ಇಬ್ಬರೂ ಒಂದೇ ದಾರಿಯಲ್ಲಿ ಎದುರು ಸಿಕ್ಕರೆ ಮೊದಲು ಬ್ರಾಹ್ಮಣನನ್ನು ಹೊಡೆದುಸಾಯಿಸಿ ಎಂದು ಹೇಳಿ, ಬರೆದು ಈ ಮಹಾತ್ಮ ಚಪ್ಪಾಳೆ ಗಿಟ್ಟಿಸಿದ. ಅಲ್ಲಿಗೆ ಅವನದೆಂಬ ಅಸ್ತಿತ್ವವನ್ನು ತಮಿಳುನಾಡಿನಲ್ಲಿ ಊರಿದಂತಾಯಿತು.

ರಾಮಸ್ವಾಮಿ ಅಲಿಯಾಸ್ ಪೆರಿಯಾರ್ ಬ್ರಾಹ್ಮಣ ವಿರೋಧಿಯಾಗಿದ್ದು, ಉಳಿದೆಲ್ಲ ದೀನದಲಿತರ ಪರವಾಗಿದ್ದ ಎಂಬ ಭ್ರಮೆ ನಮ್ಮ ಕೆಲವು ದಲಿತನಾಯಕರಿಗಿದೆ. ಆದರೆ, 16 ಏಪ್ರಿಲ್ 1950ರಲ್ಲಿ ಆತ ಬರೆದಿದ್ದ ಮಾತುಗಳನ್ನು ಇವರು ಮರೆತೇಬಿಟ್ಟಿದ್ದಾರೆ. ಸಮಾಜದಲ್ಲಿ ಬ್ರಾಹ್ಮಣರು, ಶೂದ್ರರು ಮತ್ತು ಪಂಚಮರು ಎಂದು ಮೂರು ಗುಂಪು. ಬ್ರಾಹ್ಮಣರು ಮೇಲ್ವರ್ಗದ ಮಂದಿ. ಅವರಿಗೆ ಬೇಕಾದ ಎಲ್ಲ ಸವಲತ್ತುಗಳೂ ಹೇಗಾದರೂ ದಕ್ಕಿಬಿಡುತ್ತವೆ. ಇನ್ನು ಪಂಚಮರು? ಸಂವಿಧಾನದ ಹೆಸರಲ್ಲಿ ಅವರೂ ಬೇಕುಬೇಕಾದ ಸವಲತ್ತುಗಳನ್ನೆಲ್ಲ ಅಧಿಕಾರಯುತವಾಗಿ ಕಸಿದುಕೊಂಡುಬಿಡುತ್ತಾರೆ. ಆದರೆ ನಿಜವಾಗಿಯೂ ಎಲ್ಲ ಸೌಲಭ್ಯಗಳಿಂದ ವಂಚಿತರಾಗುವವರು ಶೂದ್ರರು. ನನ್ನ ಹೋರಾಟ ಅವರಿಗಾಗಿ – ಎಂದು ಅತ್ಯಂತ ಸ್ಪಷ್ಟವಾಗಿ ರಾಮಸ್ವಾಮಿ ಬರೆದಿದ್ದ. ಇಲ್ಲಿ ಪಂಚಮರು ಎಂದರೆ ದಲಿತರು. ಶೂದ್ರರು ಎಂದರೆ ಬ್ರಾಹ್ಮಣ ಮತ್ತು ದಲಿತವರ್ಗಗಳ ಹೊರತಾಗಿ ಮಿಕ್ಕ ಎಲ್ಲಾ ಜನ! ಇದರಲ್ಲಿ ಆತನದ್ದೇ ಜಾತಿಯಾದ ನಾಯಕರು, ಬಲಿಜರು ಕೂಡ ಬರುತ್ತಾರೆ. ಒಂದಾನೊಂದು ಕಾಲದಲ್ಲಿ ತಮಿಳುನಾಡನ್ನು ಆಳಿದ ವರ್ಗ ಕೂಡ ಅವನ ದೃಷ್ಟಿಯಲ್ಲಿ ಸವಲತ್ತುಗಳಿಂದ ವಂಚಿತವಾದ ವರ್ಗವಾಗಿತ್ತು! ರಾಮಸ್ವಾಮಿ ತನ್ನ ಜೀವನದುದ್ದಕ್ಕೂ ಗಾಂಧೀಜಿ ಮತ್ತು ಅಂಬೇಡ್ಕರ್ ಅವರನ್ನು ನಖಶಿಖಾಂತ ದ್ವೇಷಿಸಿದ. ದಲಿತರಿಗೆ 15% ಮೀಸಲಾತಿ ಇಡುವ ಪ್ರಸ್ತಾಪವನ್ನು ಅಂಬೇಡ್ಕರ್ ಸಂವಿಧಾನದಲ್ಲಿ ಸೇರಿಸಿದರೆಂಬ ವಿಷಯದಲ್ಲಿ ರಾಮಸ್ವಾಮಿ ಉರಿದುಕೊಂಡಿದ್ದ. ಸಂವಿಧಾನವನ್ನು ಬರೆದವರು ಬ್ರಾಹ್ಮಣರು. ಮೊದಲಿಗೆ ದಲಿತರಿಗೆ 10% ಮೀಸಲಾತಿ ಇಡಬೇಕೆಂಬ ಬೇಡಿಕೆ ಅಂಬೇಡ್ಕರ್‌ದಾಗಿತ್ತು. ಆದರೆ ಬ್ರಾಹ್ಮಣರು ಅಂಬೇಡ್ಕರ್ ಅವರಿಗೆ ದುಡ್ಡಿನ ಸಂಚಿ ಕೊಟ್ಟು ಆ ಮೀಸಲಾತಿಯನ್ನು 15%ಗೆ ಏರಿಸಿದರು! ಬ್ರಾಹ್ಮಣರು ಕೊಟ್ಟ ಲಂಚಕ್ಕೆ ತಲೆಬಾಗಿ ಅಂಬೇಡ್ಕರ್ ಆ 15% ಮೀಸಲಾತಿಗೆ ಸಮ್ಮತಿ ಸೂಚಿಸಿದರು ಎಂದು ಬರೆದ ರಾಮಸ್ವಾಮಿ! ಬರಬರುತ್ತ ರಾಮಸ್ವಾಮಿ ಕಟುವಾದ. ಖಾರವಾದ. ಮೊಂಡನಾದ. ನಾಝಿ ಚಳವಳಿಯ ರೀತಿಯ ಹೋರಾಟವನ್ನು ತಮಿಳುನಾಡಲ್ಲೂ ಮಾಡುತ್ತೇನೆ; ಹೇಗೆ ಯಹೂದ್ಯರು ಜರ್ಮನಿ ಬಿಟ್ಟು ಪರದೇಶಿಗಳಾಗಿ ಜಗತ್ತೆಲ್ಲ ಅಲೆಯಬೇಕಾಯಿತೋ ಹಾಗೆಯೇ ತಮಿಳುನಾಡಿನ ಬ್ರಾಹ್ಮಣರು ದೇಶಾಂತರ ಹೋಗುವಂತೆ ಮಾಡುತ್ತೇನೆ – ಎನ್ನುತ್ತಿದ್ದ. ದೇವಸ್ಥಾನಗಳನ್ನು ಪುಡಿಮಾಡಿ; ಬ್ರಾಹ್ಮಣರನ್ನು ಸಿಕ್ಕಸಿಕ್ಕಲ್ಲಿ ಥಳಿಸಿ; ಅವರ ಜನಿವಾರ ಕಿತ್ತೆಸೆಯಿರಿ; ಅವರ ಜುಟ್ಟು ಕತ್ತರಿಸಿ ಎಂದು ದಿನಬೆಳಗಾದರೆ ಒಂದಿಲ್ಲೊಂದು ಮಾಧ್ಯಮದಲ್ಲಿ ಕಿರುಚಾಡುತ್ತಿದ್ದ. ರಾಮಾಯಣದಂಥ ರಾಮಾಯಣ ಕೂಡ ಅವನಿಗೆ ಆರ್ಯ – ದ್ರಾವಿಡ ಹೋರಾಟದ ಸಂಕೇತವಾಗಿ ಕಾಣಿಸತೊಡಗಿತು. ಪುತ್ರವಾತ್ಸಲ್ಯದಿಂದ ಗೋಳಾಡುವ ದಶರಥ, ತನ್ನ ಮಗನ ಏಳಿಗೆಗಾಗಿ ಏನನ್ನಾದರೂ ಮಾಡಲು ತಯಾರಾಗಿ ನಿಂತ ಕೈಕೇಯಿ, ಕೋಪವನ್ನು ಹದ್ದುಬಸ್ತಿನಲ್ಲಿಡಲಾಗದ ಲಕ್ಷ್ಮಣ, ಆಭರಣಗಳೆಂದರೆ ಬಾಯಿಬಾಯಿ ಬಿಡುತ್ತಿದ್ದ ಸೀತೆ (?!) – ಇವರೆಲ್ಲ ಆರ್ಯಮನಸ್ಥಿತಿಯ ಪ್ರತೀಕಗಳು ಎಂದು ಕರೆದ. ರಾಮಾಯಣದಲ್ಲಿ ದ್ರವಿಡದೇಶೀಯರನ್ನು ಹೀನಾಯವಾಗಿ ಚಿತ್ರಿಸಲಾಗಿದೆ ಎಂದು ಹೇಳಿ ರಾವಣನ ಪರವಾಗಿ ಉದ್ದುದ್ದ ಬ್ಯಾಟಿಂಗ್ ಮಾಡಿದ. ರಾಮಸ್ವಾಮಿಯ ಕುರುಡು

ಅನುಯಾಯಿಗಳು, ಎಂದೆಂದೂ ರಾಮಾಯಣವನ್ನು ಓದದೇ ಇದ್ದ ಅರೆಹುಚ್ಚ ಬುದ್ಧಿಜೀವಿಗಳು ಅಂದು ಆತ ಬರೆದಿಟ್ಟ ಮಾತುಗಳನ್ನೇ ಇಂದೂ ಹೇಳುತ್ತ ಬಂದಿದ್ದಾರೆ. ರಾಮಸ್ವಾಮಿಯ ಅತಿದೊಡ್ಡ ಕೊಡುಗೆ ಈ ದೇಶಕ್ಕೆ ಏನು ಎಂದರೆ – ಅಂಡೆಪಿರ್ಕಿ ಬುದ್ಧಿಜೀವಿಗಳಿಗೆ ಜೀವನಪೂರ್ತಿ ಬಾಯಾಡಿಸುತ್ತಿರಲು ಬೇಕಾದ ಅಪದ್ಧ ಸಿದ್ಧಾಂತಗಳನ್ನು ಹುಟ್ಟಿಸಿದ್ದು!

ರಾಮಸ್ವಾಮಿ ಅದೆಂಥ ವಿಕೃತನಾಗಿದ್ದನೆಂದರೆ ತನ್ನ ದೈವಭಕ್ತ ಪತ್ನಿ ನಾಗಮ್ಮನನ್ನು ದೇವಸ್ಥಾನಕ್ಕೆ ಹೋಗದಂತೆ ತಡೆಯಬೇಕೆಂದು ಆಕೆ ದೇವದಾಸಿ ಎಂದು ಕೂಡ ಸುದ್ದಿ ಹಬ್ಬಿಸಿದ! ಆಕೆ ದೇವಸ್ಥಾನಕ್ಕೆ ಹೋದರೆ ಬೀದಿಕಾಮಣ್ಣರು ಆಕೆಯನ್ನು ಕಿಚಾಯಿಸುವಂತೆ ಛೂಬಿಟ್ಟು, ಕೊನೆಗೆ ಆಕೆ ದೇವಸ್ಥಾನ ಭೇಟಿಯನ್ನು ಸಂಪೂರ್ಣವಾಗಿ ನಿಲ್ಲಿಸುವಂತೆ ಮಾಡಿ ತೃಪ್ತಿಪಟ್ಟ! ಯೌವನದ ದಿನಗಳಲ್ಲಿ ನಿತ್ಯ ವೇಶ್ಯಾಗೃಹಗಳ ಗಿರಾಕಿಯಾಗಿದ್ದ ರಾಮಸ್ವಾಮಿ ತನ್ನ ಮೊದಲ ಹೆಂಡತಿ ತೀರಿಕೊಂಡ ಮೇಲೆ, ಎಂಬತ್ತರ ವಯಸ್ಸಿನಲ್ಲಿ, ಇನ್ನೂ ಮೂವತ್ತರ ಹರೆಯದಲ್ಲಿದ್ದ ಹುಡುಗಿ ಮಣಿಯಮ್ಮಳನ್ನು ಮದುವೆಯಾದ. ಆಕೆ ಬೇರಾರೂ ಅಲ್ಲ, ಆತನ ಸಾಕುಮಗಳೇ! ಹೆಣ್ಣಿನ ವ್ಯಕ್ತಿತ್ವವನ್ನು ಎತ್ತಿಹಿಡಿಯುವ ತಮಿಳರ ಮಹಾಕಾವ್ಯವಾದ ಶಿಲಪ್ಪದಿಕಾರಂ ಮೇಲೆಯೂ ಆತನಿಗೆ ಅಂಥ ಒಲವೇನಿರಲಿಲ್ಲ. ಇದೂ ಒಂದು ಕಾವ್ಯವಾ? ಏನಿದೆ ಇದರಲ್ಲಿ? ಮೊದಲ ಪುಟದಿಂದ ಕೊನೆಯ ಪುಟದವರೆಗೂ ಈ ಕಾವ್ಯದಲ್ಲಿರುವುದು ಆರ್ಯ ಮನಸ್ಥಿತಿಯೇ. ಇದು ದ್ರಾವಿಡರಿಗೆ ಅಪಥ್ಯವಾಗಬೇಕು ಎನ್ನುತ್ತಿದ್ದ! ಎಲ್ಲ ಬಿಡಿ, ರಾಜ್ಯದಲ್ಲಿ ಹಣದುಬ್ಬರ ಕಾಣಿಸಿಕೊಳ್ಳುತ್ತಿರುವುದು ದಲಿತ ಮಹಿಳೆಯರು ರವಿಕೆ ತೊಡುವುದಕ್ಕೆ ಶುರುಮಾಡಿದ್ದರಿಂದ – ಎಂಬ ಅದ್ಭುತ ಆಣಿಮುತ್ತು ಕೂಡ ಇವನದ್ದೇ! ಇಂಥ ವ್ಯಕ್ತಿಯನ್ನು ದಕ್ಷಿಣ ಭಾರತದ ಬುದ್ಧಿಜೀವಿಗಳು ಮಹಿಳಾ ಸ್ವಾತಂತ್ರ್ಯಕ್ಕಾಗಿ ಹೋರಾಡಿದವನು ಎಂದು ಹೇಳಿದಾಗ ಎಲ್ಲೆಲ್ಲಿಂದಲೋ ನಗು ಬರುವುದಿಲ್ಲವೇ?

ರಾಮಸ್ವಾಮಿ ಮಾಡಿದ ಭಾನಗಡಿಗಳು ಒಂದೆರಡಲ್ಲ. ಸ್ವಾತಂತ್ರ್ಯಕ್ಕೆ ಮೊದಲು ಅಖಂಡ ಭಾರತ ಎರಡು ಹೋಳಾಗಲಿದೆ ಎಂಬ ಸುದ್ದಿ ಬಂದಾಗ ಆಗಿನ ಕಾಂಗ್ರೆಸ್ ನಾಯಕರು ಕಣ್ಣೀರು ಹಾಕಿದರೆ ರಾಮಸ್ವಾಮಿ ಮಾತ್ರ ಕುಣಿದಾಡಿದ. ಪರಂಗಿಗಳ ಬಂಗಲೆಗಳ ಬಾಗಿಲು ತಟ್ಟಿ, ಕೇವಲ ಎರಡಲ್ಲ, ಮೂರು ತುಂಡು ಮಾಡಬೇಕು ಎಂಬ ಬೇಡಿಕೆ ಇಟ್ಟ. ಅವನ ಪ್ರಕಾರ, ತಮಿಳರಿಗೆ ದ್ರವಿಡಸ್ತಾನ ಎಂಬ ದೇಶವನ್ನೂ ಮಾಡಬೇಕಿತ್ತಂತೆ! ಮುಸ್ಲಿಮ್ ಲೀಗ್ ಪಾಕಿಸ್ತಾನದ ಉಸ್ತುವಾರಿ ನೋಡಿಕೊಂಡಂತೆ ದ್ರವಿಡಸ್ತಾನದ ಸುಪರ್ದಿಯನ್ನು ಈತನ ಜಸ್ಟಿಸ್ ಪಾರ್ಟಿಗೆ ಕೊಡಬೇಕಿತ್ತಂತೆ! ಬ್ರಿಟಿಷರು ಅವನ ಬೇಡಿಕೆಗೆ ಸೊಪ್ಪು ಹಾಕದೇ ಇದ್ದಾಗ ಮಹಮ್ಮದಾಲಿ ಜಿನ್ನಾನ ಕಾಲು ಹಿಡಿದು ಬೇಡಿದ. ಆದರೆ, ಅದು ನಿನ್ನ ಸಮಸ್ಯೆ, ನೀನೇ ಪರಿಹರಿಸಿಕೋ ಎಂದು ಜಿನ್ನಾ ತನ್ನ ಕಾಲು ಕೊಡವಿ ನಡೆದುಬಿಟ್ಟ. ತನ್ನ ಬೇಡಿಕೆಗೆ ತಕ್ಕ ಪ್ರತಿಕ್ರಿಯೆ ಯಾವ ಕಡೆಯಿಂದಲೂ ಬರದೆ ದ್ರವಿಡಸ್ತಾನದ ಆಸೆ ಭಗ್ನಗೊಂಡಾಗ ಇದೇ ರಾಮಸ್ವಾಮಿ 1947ರ ಆಗಸ್ಟ್ 15ನ್ನು ಕರಾಳ ದಿನವಾಗಿ ಆಚರಿಸಿ ಕಪ್ಪು ಬಾವುಟ ಪ್ರದರ್ಶಿಸಿದ. ನಮ್ಮ ಬೇಡಿಕೆ ಈಡೇರಿಸಿಕೊಳ್ಳಬೇಕಾದರೆ ಮೊದಲು ನಾವೆಲ್ಲ ಸೇರಿ ಭಾರತದ ಸಂವಿಧಾನವನ್ನು ಸಾರ್ವಜನಿಕವಾಗಿ ಸುಡಬೇಕು. ಆಗ ಸರಕಾರ ಬಗ್ಗದಿದ್ದರೆ ದೇಶಾದ್ಯಂತ ಗಾಂಧಿ ಚಿತ್ರಗಳನ್ನು ಸುಡುವ ಕಾರ್ಯಕ್ರಮ ಇಟ್ಟುಕೊಳ್ಳಬೇಕು. ಅದಕ್ಕೂ ಜಗ್ಗದಿದ್ದರೆ ಗಾಂಧಿ ಪ್ರತಿಮೆಗಳು ಎಲ್ಲೆಲ್ಲಿ ಇವೆಯೋ ಅವೆಲ್ಲವನ್ನೂ ಭಗ್ನಗೊಳಿಸಬೇಕು – ಎಂದು ಬರೆದವನು ರಾಮಸ್ವಾಮಿ. ಗಾಂಧಿ ಮತ್ತು ನೆಹರೂ ಪ್ರತಿಮೆಗಳನ್ನು ಒಡೆದುಹಾಕಿ. ಬ್ರಾಹ್ಮಣರನ್ನು ಸಾರ್ವಜನಿಕವಾಗಿ ಥಳಿಸಿ. ಬ್ರಾಹ್ಮಣರ ಮನೆಗಳಿಗೆ ಬೆಂಕಿಯಿಕ್ಕಿ – ಎಂದು ಘೋಷಣೆ ಕೂಗಿದ್ದವನು ಈ ಶಾಂತಿದೂತ! ಇಂಥ ವಿಕ್ಷಿಪ್ತನನ್ನು ನಮ್ಮ ಬುದ್ದುಜೀವಿಗಳು ಗಾಂಧಿ, ಅಂಬೇಡ್ಕರ್ ಪಕ್ಕದಲ್ಲಿಟ್ಟು ಮಾಲೆ ಹಾಕಿ ಪೂಜಿಸಿದಾಗ ತಲೆ ಚಚ್ಚಿಕೊಳ್ಳುವಂತಾಗುತ್ತದೆ. ತಮಿಳುನಾಡಲ್ಲಿ ಗಲ್ಲಿಗಲ್ಲಿಯಲ್ಲೂ ದೇವಸ್ಥಾನಗಳಿಗೆ ನುಗ್ಗಿ ದೇವರ ಮೂರ್ತಿಗಳಿಗೆ ಚಪ್ಪಲಿಹಾರ ಹಾಕುತ್ತಿದ್ದ ಈ ಮನುಷ್ಯನಿಗೆ ಹೂಹಾರ ಹಾಕುವವರೂ ಅಂಥ ಚಪ್ಪಲಿಸಂಸ್ಕೃತಿಯವರೇ ಆಗಿರಬೇಕಲ್ಲವೇ?

ಎಲ್ಲ ಬಿಡಿ, ನೆಹರೂ ಕೂಡ ಈ ರಾಮಸ್ವಾಮಿಯ ಹುಚ್ಚಾಟಗಳನ್ನು ನೋಡಿ Old and senile men like Periyar deserve a place more in a lunatic asylum than in public life. It is high time Periyar and his followers were banished from this land ಎಂಬ ಮಾತುಗಳನ್ನು ಹೇಳಬೇಕಾಯಿತು. ರಾಮಸ್ವಾಮಿಯ ಅನುಯಾಯಿಗಳ ಹುಚ್ಚಾಟ ತಮಿಳುನಾಡಿನಲ್ಲಿ ಅದೆಷ್ಟು ಮಿತಿ ಮೀರಿತ್ತೆಂದರೆ ರಾಮಾಯಣವನ್ನು ತಿರುಚಿ ರಾಮನನ್ನು ಖಳನಾಯಕನಂತೆ ತೋರಿಸಿ ಅವರು ಆಡುತ್ತಿದ್ದ ನಾಟಕಗಳನ್ನು ನಿಷೇಧಿಸಲಿಕ್ಕಾಗಿಯೇ ಕಾಮರಾಜರ ಕಾಂಗ್ರೆಸ್ ಸರಕಾರ ನಾಟಕ ಕಾಯಿದೆ ತರಬೇಕಾಯಿತು! ರಾಮಸ್ವಾಮಿಯ 94 ವರ್ಷಗಳ ದೀರ್ಘ ಜೀವನವನ್ನು ಈಗ, ದೂರದಿಂದ ಅವಲೋಕಿಸಿದಾಗ, ಆತ ಅದೆಂಥ ಅರ್ಥಹೀನ ಮನುಷ್ಯನಾಗಿದ್ದನೆಂಬುದು ಅರ್ಥವಾಗುತ್ತದೆ. ಆತನಿಗೆ ಜೀವನದಲ್ಲಿದ್ದದ್ದು ಒಂದೇ – ಎಲ್ಲರಿಗಿಂತ ಭಿನ್ನನೆಂದು ತೋರಿಸಿಕೊಳ್ಳುವ ಅದಮ್ಯ ತೆವಲು. ಯೇನಕೇನ ಪ್ರಕಾರೇಣ ತನ್ನ ಅಸ್ತಿತ್ವ ಸ್ಥಾಪಿಸಬೇಕಿತ್ತು. ಅದಕ್ಕಾಗಿ ಸಂಸ್ಕೃತದ ಸುಭಾಷಿತದಂತೆ ಮಡಕೆ ಒಡೆದು ಬಟ್ಟೆ ಹರಿದು ಗಲಾಟೆ ಎಬ್ಬಿಸಬೇಕಿತ್ತು ಅಷ್ಟೆ. ರಾಮಸ್ವಾಮಿ ನಡೆಸಿದ ಯಾವೊಂದು ಚಳವಳಿಗೂ ಇಂದು ಅರ್ಥ ಉಳಿದಿಲ್ಲ. ಆತ ಕೊರೆದಿಟ್ಟುಹೋದ ಆರ್ಯ–ದ್ರಾವಿಡ ಸಿದ್ಧಾಂತ, ಹಿಂದೀ ವಿರೋಧ, ಬ್ರಾಹ್ಮಣ ದ್ವೇಷ, ನಾಸ್ತಿಕವಾದ, ಭಾರತೀಯ ಕಾವ್ಯೇತಿಹಾಸದ ಉಪೇಕ್ಷೆ, ಸಂಸ್ಕೃತ ವಿರೋಧ, ಭಾರತದ ಮಹಾಕಾವ್ಯಗಳ ಭರ್ತ್ಸನೆ ಮುಂತಾದವು ಆತನ ಒಂದಷ್ಟು ಅನುಯಾಯಿ ಬುದ್ಧಿಜೀವಿಗಳಲ್ಲಿ ಇನ್ನೂ ಕುಟುಕು ಜೀವ ಉಳಿಸಿಕೊಂಡಿವೆ ಎನ್ನುವುದನ್ನು ಬಿಟ್ಟರೆ ರಾಮಸ್ವಾಮಿ, ಆತನ ಪ್ರತಿಮೆ ಇದ್ದರೂ ಇಲ್ಲದಿದ್ದರೂ, ಅಪ್ರಸ್ತುತನಾಗಿದ್ದಾನೆ. ಅಂಥ ದುರುಳನ ಸಮರ್ಥನೆಗೆ ನಿಲ್ಲುವವರೂ ಅವನಂಥ ದುರುಳರೇ ಆಗಿರುತ್ತಾರೆ ಎಂಬುದನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕು.

ಜೀವದಾನಕ್ಕೆ ಬೇಕಿದೆ ರಕ್ತದಾನದ ಹುಮ್ಮಸ್ಸು

ಯಾರಿಗೆ ಹೇಳೋಣ?

ಪಿ. ರಾಜೀವ್

ಲೇಖಕರು, ಶಾಸಕರು (ಕುಡಚಿ ಕ್ಷೇತ್ರ)

ಸೃಷ್ಟಿಯ ವಿಸ್ಮಯಗಳಿಗೆ ಸವಾಲು ಹಾಕಲು ನಮ್ಮಿಂದ ಸಾಧ್ಯವಿಲ್ಲ. ಇಂಥ ಸವಾಲುಗಳನ್ನು ಹೃದಯವಂತಿಕೆ ಹಾಗೂ ಮಾನವೀಯತೆಯ ಮೂಲಕ ಮಾತ್ರ ಸ್ವೀಕರಿಸಬಹುದಾಗಿದೆ. ಮಾನವನ ಬುದ್ಧಿವಂತಿಕೆ ಹಾಗೂ ತಾಂತ್ರಿಕತೆಯಿಂದ ಸೃಷ್ಟಿಸಲಾಗದ ಮೂಲಭೂತಗಳು ನಿಸರ್ಗದಿಂದ ಮಾತ್ರ ಸೃಷ್ಟಿಯಾಗುತ್ತವೆ.ಅವುಗಳನ್ನು ಬಹು ಎಚ್ಚರಿಕೆಯಿಂದ ಉಳಿಸುವುದು ಮತ್ತು ಬಳಸುವುದು ಮಾತ್ರ ನಮ್ಮ ಕೈಯಲ್ಲಿದೆ. ಹಾಗೆ ಮಾನವನಿಂದ ಸೃಷ್ಟಿಸಲಾಗದ ಅತ್ಯವಶ್ಯವಾದ ಅಂಶವೇ ರಕ್ತ. ರಕ್ತವನ್ನು ನಾವು ತಯಾರಿಸಲಾರೆವು. ಆದರೆ ಮನುಷ್ಯ ದೇಹದಲ್ಲಿ ಉತ್ಪತ್ತಿಯಾಗುವ ರಕ್ತವು ಇನ್ನೊಬ್ಬರ ಜೀವವನ್ನು ಉಳಿಸಬಲ್ಲದು.

ಭಾರತದಲ್ಲಿ ಪ್ರತಿ 2 ಸೆಕೆಂಡುಗಳಿಗೊಂದರಂತೆ ಅಪಘಾತಗಳು ಸಂಭವಿಸುತ್ತಲಿವೆ. ಪ್ರತಿ 6 ಸೆಕೆಂಡಿಗೊಬ್ಬರಂತೆ ರಕ್ತದ ಅವಶ್ಯಕತೆಯಿಂದ ನರಳುತ್ತಿದ್ದಾರೆ. ಸರಾಸರಿ ಒಂದು ವರ್ಷದಲ್ಲಿ ಭಾರತದಲ್ಲಿ ಬೇಕಾಗಿರುವ ರಕ್ತದ ಪ್ರಮಾಣ 12 ಮಿಲಿಯನ್ ಘಟಕಗಳಷ್ಟು. ಆದರೆ ನಮ್ಮಲ್ಲಿ ಈಗ ಸದ್ಯಕ್ಕೆ ಲಭ್ಯವಿರುವ ರಕ್ತದ ಪ್ರಮಾಣ 9 ಮಿಲಿಯನ್ ಘಟಕಗಳಷ್ಟಾಗಿವೆ. ಅಂದರೆ 3 ಮಿಲಿಯನ್ ಘಟಕಗಳಷ್ಟು ರಕ್ತದ ಕೊರತೆ ಸಾವು ಬದುಕಿನ ನಡುವೆ ಹೋರಾಡುತ್ತಿರುವ ಅಸಂಖ್ಯ ಜನರಿಗಿದೆ. ಹಾಗಾಗಿ ಪ್ರತಿ 7 ನಿಮಿಷಕ್ಕೊಬ್ಬರಂತೆ ವ್ಯಕ್ತಿಯು ರಕ್ತದ ಕೊರತೆಯಿಂದ ಅಸುನೀಗುತ್ತಿದ್ದಾನೆ.

ಅರ್ಧಕ್ಕಿಂತ ಹೆಚ್ಚು ಸಮೂಹದ ಯುವಕರನ್ನೊಳಗೊಂಡಿರುವ ಭಾರತ ದೇಶದಲ್ಲಿ ಅವಶ್ಯಕ ಜೀವ ರಕ್ಷಣೆಗಾಗಿ ರಕ್ತದ ಅವಶ್ಯಕತೆ ಬಹಳಷ್ಟಿದೆ. ಗ್ರಾಮೀಣ ಪ್ರದೇಶಗಳಲ್ಲಿ ರಕ್ತದ ಬ್ಯಾಂಕ್‌ಗಳು ಲಭ್ಯವಿಲ್ಲದಿರುವುದರಿಂದ ಬಹಳಷ್ಟು ಜೀವಗಳು ಸಾವನ್ನಪ್ಪುತ್ತಲಿವೆ. ಅಲ್ಲಲ್ಲಿ ರಕ್ತದಾನ ಶಿಬಿರಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದರೂ ಸಹ ಬಹಳಷ್ಟು ಜನ ಸ್ವಯಂ ಪ್ರೇರಿತರಾಗಿ ರಕ್ತದಾನಕ್ಕೆ ಮುಂದಾಗುತ್ತಿಲ್ಲ. ವಿದ್ಯಾರ್ಥಿಗಳಲ್ಲಿ ಮತ್ತು ಸ್ವಯಂಸೇವಕರಲ್ಲಿ ರಕ್ತದಾನದ ಬಗ್ಗೆ ಅರಿವು ಮತ್ತು ತಿಳಿವಳಿಕೆ ಮೂಡಿಸುವ ದೊಡ್ಡ ಪ್ರಮಾಣದ ಪ್ರಯತ್ನ ಜರುಗುತ್ತಿಲ್ಲ. ಇದರಿಂದಾಗಿ ರಕ್ತದಾನವೆಂದರೆ ಕೆಲವೇ ಕ್ರೀಡಾಪಟುಗಳು, ಸಾಮಾಜಿಕ ಸ್ವಯಂಸೇವಕರು ಮಾತ್ರ ಭಾಗವಹಿಸುವ ಪ್ರಕ್ರಿಯೆ ಎಂಬಂತೆ ರೂಪಿತಗೊಂಡಿದೆ.

ಕೆಲವೊಂದು ಸಾಮಾಜಿಕ ಪ್ರಜ್ಞೆಗಳು ಬೆಳೆದು ಬಂದ ಪರಿಸರ, ಶಾಲೆ–ಕಾಲೇಜುಗಳ ವಾತಾವರಣ ಹಾಗೂ ಸಾಮಾಜಿಕ ಜಾಗೃತಾ ಕಾರ್ಯಕ್ರಮಗಳನ್ನವಲಂಬಿಸಿರುತ್ತವೆ. ಕೃತಕ ಅಭಿಮಾನಗಳು ಮತ್ತು ಹಿಂಸಾವಿನೋದ ಪ್ರವೃತ್ತಿಗಳು ಮನುಷ್ಯರನ್ನು ಕೃತಕ ಭಾವುಕರನ್ನಾಗಿಸುತ್ತವೆ. ದೇಶ ಸೇವೆ ಮಾಡಬೇಕೆಂಬ ಮನೋಭಾವನೆಯಿಂದ ಸೇನೆಗೆ ಸೇರ್ಪಡೆಗೊಳ್ಳುವುದು ಒಂದು ವಿಧವಾದರೆ, ಕಿತ್ತು ತಿನ್ನುವ ಬಡತನ ಅನ್ಯ ಮಾರ್ಗವಿಲ್ಲದೆ ಸೈನ್ಯಕ್ಕೆ ಸೇರುವಂತೆ ಒತ್ತಾಯಪಡಿಸುವುದು ಇನ್ನೊಂದು ವಿಧವಾಗುತ್ತದೆ. ಕೆಲವು ದೇಶಗಳಲ್ಲಿ ಎಂತಹ ಉನ್ನತ ಹುದ್ದೆಯಲ್ಲಿದ್ದರೂ ಹಾಗೂ ಎಷ್ಟೇ ಶ್ರೀಮಂತರಿದ್ದರೂ ತಮ್ಮ ಮಕ್ಕಳನ್ನು ಸೈನ್ಯದಲ್ಲಿ ಸೇವೆ ಸಲ್ಲಿಸುವಂತೆ ಪ್ರೇರೇಪಿಸುತ್ತಾರೆ ಹಾಗೂ ಪ್ರೋತ್ಸಾಹ ನೀಡುತ್ತಾರೆ. ಆದರೆ ನಮ್ಮ ದೇಶದಲ್ಲಿ ದೇಶ ಸೇವೆ ಮಾಡಬೇಕೆಂಬ ಮನೋಭಾವನೆಯಿಂದಲೆ ಸೈನ್ಯಕ್ಕೆ ಸೇರುವವರ ಸಂಖ್ಯೆ ವಿರಳವಾಗಿದೆಯೆಂದರೆ ತಪ್ಪಾಗಲಿಕ್ಕಿಲ್ಲ! ಹಾಗೆಯೇ ದೇಶ ಪ್ರೇಮವನ್ನು ಸರಳಗೊಳಿಸಲಾಗುತ್ತಿದೆ. ಭಾರತ್ ಮಾತಾ ಕೀ ಜೈ ಎಂಬ ಘೋಷಣೆಯನ್ನು ಕೂಗುವುದು ಮಾತ್ರವೇ ದೇಶಪ್ರೇಮಿ ಎಂಬ ಹಣೆಪಟ್ಟಿಗೆ ಪಡೆಯಬಹುದಾದ ಪರವಾನಿಗೆಯಂತಾಗಿದೆ. ಈ ದೇಶದ ನೆಲ–ಜಲ, ಭಾಷೆ ಹಾಗೂ ಸಾಂಸ್ಕೃತಿಕ ವೈಭವಗಳನ್ನು ಮತ್ತಷ್ಟು ಹಸನುಗೊಳಿಸುವ ಚಟುವಟಿಕೆಗಳು ಕಣ್ಮರೆಯಾಗುತ್ತಿವೆ. ಪ್ರಾಮಾಣಿಕತೆ ಎಂಬುದು ಕೇವಲ ಅವಕಾಶ ವಂಚಿತರು ಬಳಸಬಹುದಾದ ಪದವೆಂಬಂತೆ ಭಾಸವಾಗುತ್ತಿದೆ. ಪ್ರಾಮಾಣಿಕತೆಯ ಬಗ್ಗೆ ಬೊಬ್ಬಿಡುವ ಸುಧಾರಕರೆಂಬಂತೆ ಸ್ವಯಂಘೋಷಿತ ವ್ಯಕ್ತಿಗಳು ಯಾವುದಾದರೂ ಅವಕಾಶ ದೊರೆಯುತ್ತಿದ್ದಂತೆ ಪ್ರಾಮಾಣಿಕತೆಯನ್ನು ಮರೆತುಬಿಡುತ್ತಾರೆ. ಇವುಗಳನ್ನೆಲ್ಲ ಗಮನಿಸಿದಾಗ ಆರೋಗ್ಯಪೂರ್ಣ ವ್ಯಕ್ತಿತ್ವವನ್ನು ನಿರ್ಮಿಸುವಲ್ಲಿ ನಾವು ಸೋಲುತ್ತಿದ್ದೇವೆಯೆ? ಎಂಬ ಅಂಶ ಮತ್ತೆ ಮತ್ತೆ ನಮ್ಮನ್ನು ಎಚ್ಚರಿಸುತ್ತದೆ.

ರಕ್ತದಾನ ಶ್ರೇಷ್ಠ ದಾನ ಎಂಬ ಫಲಕಗಳು ಅಲ್ಲಲ್ಲಿ ಗೋಚರಿಸುತ್ತವೆ. ಆದರೆ ಸ್ವಯಂ ಪ್ರೇರಿತರಾಗಿ ರಕ್ತದಾನಕ್ಕೆ ಮುಂದಾಗುವವರ ಸಂಖ್ಯೆ ಬಹಳಷ್ಟು ಕಡಿಮೆ. ಅಲ್ಲಲ್ಲಿ ರಕ್ತದಾನ ಶಿಬಿರವನ್ನೇರ್ಪಡಿಸುವ ರೋಟರಿ ಕ್ಲಬ್‌ಗಳು, ಎನ್‌ಎಸ್‌ಎಸ್ ಶಿಬಿರಗಳು, ಇನ್ನಿತರ ಎನ್.ಜಿ.ಓ.ಗಳು ಗಣನೀಯ ಮಟ್ಟದಲ್ಲಿ ರಕ್ತದಾನಿಗಳನ್ನು ಪ್ರೇರೇಪಿಸುವಲ್ಲಿ ವಿಫಲವಾಗಿವೆ. ನಮ್ಮ ದೇಶದಲ್ಲಿ ಹರಿಯಾಣ ರಾಜ್ಯದಲ್ಲಿ ಮಾತ್ರ ಅಗತ್ಯಕ್ಕಿಂತ ಹೆಚ್ಚಿನ ರಕ್ತದಾನ ಸಂಗ್ರಹವಾಗುತ್ತಿದೆ. ಕೆಲವೊಂದು ಬ್ಲಡ್ ಬ್ಯಾಂಕ್‌ಗಳಲ್ಲಿ ಸೂಕ್ತ ವ್ಯವಸ್ಥೆಗಳ ಕೊರತೆಯಿಂದಾಗಿ ಸಂಗ್ರಹಿಸಿದ ರಕ್ತವೂ ದೊಡ್ಡ ಪ್ರಮಾಣದಲ್ಲಿ ವ್ಯರ್ಥವಾದ ಬಗ್ಗೆ ವರದಿಯಾಗಿವೆ. ಕೆಲವೊಬ್ಬರು ಸ್ವಯಂ ಪ್ರೇರಿತರಾಗಿ ರಕ್ತದಾನಕ್ಕೆ ಮುಂದಾದರೂ ರಕ್ತದಾನ ಮಾಡಿದವರಿಗೆ ಹಣ್ಣಿನ ರಸ ಅಥವಾ ಒಂದು ಸೇಬು ಹಣ್ಣನ್ನು ನೀಡಿ ತದನಂತರದಲ್ಲಿ ಅದೇ ರಕ್ತವನ್ನು ಎಂಟರಿಂದ ಹದಿನೈದು ಸಾವಿರ ರೂಪಾಯಿಗಳವರೆಗೆ ಮಾರಿಕೊಂಡ ಉದಾಹರಣೆಗಳು ಅಲ್ಲಲ್ಲಿ ವರದಿಯಾಗಿವೆ. ಕೆಲ ಬ್ಲಡ್‌ಬ್ಯಾಂಕ್‌ಗಳು ತಮ್ಮ ಬಳಿ ರಕ್ತದ ಸಂಗ್ರಹವಿದ್ದರೂ ಕೃತಕ ಅಭಾವವನ್ನು ಸೃಷ್ಟಿಸಿ ಹೆಚ್ಚಿನ ಬೆಲೆಗೆ ರಕ್ತವನ್ನು ಮಾರಾಟ ಮಾಡುತ್ತಲಿವೆ. ಕೆಲ ಸಂದರ್ಭಗಳಲ್ಲಿ ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡಿದ ದಾನಿಗೆ ಸೂಕ್ತ ಗುಂಪಿನ ರಕ್ತದ ಅವಶ್ಯಕತೆ ಬಿದ್ದಾಗ ಅದನ್ನು ಪೂರೈಸುವಲ್ಲಿ ವಿಳಂಬ ಧೋರಣೆ ತಾಳಿದ ಉದಾಹರಣೆಗಳು ಸಾಕಷ್ಟಿವೆ. ಕೆಲ ರಕ್ತನಿಧಿ ಕೇಂದ್ರಗಳು ಹೆಚ್ಚಿನ ಮೊತ್ತ ನೀಡುವ ಗ್ರಾಹಕರಿಗೆ ಮಾತ್ರ ರಕ್ತವನ್ನು ಪೂರೈಸುವಲ್ಲಿ ತಮ್ಮ ಸಾಚಾತನವನ್ನು ತೋರಿಸುತ್ತಿವೆ. ಸಮಾಜದ ನಿರ್ಲಕ್ಷ್ಯ, ಯುವಕರ ನಿರುತ್ಸಾಹ, ಅಗತ್ಯ ಮಾಹಿತಿಯ ಕೊರತೆ, ಋಣಾತ್ಮಕ ಮನೋಭಾವ, ಬಡವ ಮತ್ತುಶ್ರೀಮಂತರ

ನಡುವಿನ ತಾರತಮ್ಯ ಇವೆಲ್ಲವುಗಳ ಸಮ್ಮಿಶ್ರಣದ ಫಲವಾಗಿ ತುರ್ತು ಸಂದರ್ಭದಲ್ಲಿ ರೋಗಿ ಅಥವಾ ಅಪೇಕ್ಷಿತನಿಗೆ ಬೇಕಾದ ಪ್ರಮಾಣದ ರಕ್ತವು ಹಾಗೂ ಗುಂಪಿನ ರಕ್ತವು ದೊರಕುತ್ತಿಲ್ಲ.

ಮಾನವ ದೇಹದಲ್ಲಿನ ಮೂಳೆಯ ಮಧ್ಯ ಭಾಗದಲ್ಲಿನ ಅಸ್ತಿಮಜ್ಜೆಯು ರಕ್ತವನ್ನು ಉತ್ಪಾದಿಸುತ್ತದೆ. ಹೀಗೆ ಉತ್ಪಾದನೆಯಾದ ರಕ್ತ ಕಣವು 120 ದಿನಗಳವರೆಗೆ ಜೀವಂತವಾಗಿರುತ್ತದೆ. ಒಮ್ಮೆ ಉತ್ಪತ್ತಿಯಾದ ರಕ್ತಕಣವನ್ನು 120 ದಿನಗಳ ನಂತರದಲ್ಲಿ ನಿಷ್ಕ್ರಿಯಗೊಳಿಸಿ ಅದನ್ನು ದೇಹದಿಂದ ಹೊರಹಾಕುವ ಕೆಲಸವನ್ನು ಯಕೃತ್ ನಿರ್ವಹಿಸುತ್ತದೆ. ಹಾಗಾಗಿ ಪ್ರತಿದಿನ ಮಿಲಿಯನ್‌ಗಟ್ಟಲೆ ರಕ್ತಕಣಗಳು ಉತ್ಪತ್ತಿಯಾಗುತ್ತಲೆ ಇರುತ್ತವೆ. ಹಾಗೂ ಅಷ್ಟೇ ಪ್ರಮಾಣದ ಹಳೆಯ ರಕ್ತಕಣಗಳು ಸಾವನಪ್ಪುತ್ತಲಿರುತ್ತವೆ. ಒಂದು ವೇಳೆ ರಕ್ತಕಣವು ಸಾವನ್ನಪ್ಪುವುದರೊಳಗಾಗಿ ಮಾನವ ದೇಹದಿಂದ ಸಂಗ್ರಹಿಸಿ ಸಂಸ್ಕರಣದಲ್ಲಿಟ್ಟಾಗ ತೊಂಭತ್ತು ದಿನಗಳಿಂದ ನೂರೆಂಬತ್ತು ದಿನಗಳವರೆಗೆ ಜೀವಂತವಾಗಿಡಬಹುದಾಗಿದೆ. ಮೊದಮೊದಲು ರಕ್ತವನ್ನು ಶೇಖರಿಸಿ, ಪರೀಕ್ಷಿಸಿ ಸೂಕ್ತವಾಗಿದ್ದಲ್ಲಿ ಯಥಾಸ್ಥಿತಿಯಲ್ಲಿಯೆ ಇನ್ನೊಬ್ಬನ ದೇಹದೊಳಕ್ಕೆ ಸೇರಿಸಲಾಗುತ್ತಿತ್ತು. ಈಗ ಮುಂದುವರೆದ ತಂತ್ರಜ್ಞಾನವಿರುವುದರಿಂದ ಒಬ್ಬರಿಂದ ಪಡೆದ ರಕ್ತದಿಂದ ಮೂರು ಜನರ ಜೀವವನ್ನು ಉಳಿಸಬಹುದಾಗಿದೆ. ಸಂಗ್ರಹಿಸಲಾದ ರಕ್ತದಿಂದ ಬಿಳಿಯ ರಕ್ತಕಣ, ಪ್ಲಾಸ್ಮಾ ಹಾಗೂ ಕೆಂಪು ರಕ್ತಕಣಗಳನ್ನಾಗಿ ಪ್ರತ್ಯೇಕಿಸಲಾಗುತ್ತದೆ. ರೋಗಿಗೆ ಯಾವ ಅಂಶದ ಕೊರತೆ ಇದೆಯೊ ಆ ಅಂಶವನ್ನು ಮಾತ್ರ ದೇಹದೊಳಗೆ ಸೇರಿಸಲಾಗುತ್ತದೆ. ಇದರಿಂದಾಗಿ ಒಬ್ಬ ವ್ಯಕ್ತಿಯ ರಕ್ತದಾನದಿಂದ ಮೂರು ಜೀವಗಳನ್ನು ಬದುಕಿಸಬಹುದಾಗಿದೆ. ಪ್ರತಿ ನೂರಿಪ್ಪತ್ತು ದಿನಕ್ಕೊಮ್ಮೆ ಸತ್ತುಹೋಗಬಹುದಾದ ರಕ್ತಕಣವನ್ನು ರಕ್ತದಾನದ ಮೂಲಕ ಬೇರೆಯವರ ಜೀವವನ್ನುಳಿಸಲು ನೆರವಾದಲ್ಲಿ ದಾನ ಮಾಡಿದ ವ್ಯಕ್ತಿಯ ಆರೋಗ್ಯದ ಮೇಲೆ ಯಾವುದೆ ಪ್ರತಿಕೂಲ ಪರಿಣಾಮಗಳು ಉಂಟಾಗುವುದಿಲ್ಲ. ತಜ್ಞರ ಅಭಿಪ್ರಾಯದ ಪ್ರಕಾರ ರಕ್ತದಾನ ಮಾಡುವುದರಿಂದ ವ್ಯಕ್ತಿಯ ಆರೋಗ್ಯ ಇನ್ನಷ್ಟು ಸುಧಾರಿಸುತ್ತದೆ. ಎಷ್ಟು ಪ್ರಮಾಣದ ರಕ್ತವನ್ನು ಹೊರ ತೆಗೆಯಲಾಗುತ್ತದೆಯೊ ಅಷ್ಟು ಪ್ರಮಾಣದ ರಕ್ತವು ತ್ವರಿತವಾಗಿ ನಲವತ್ತೆಂಟು ಗಂಟೆಗಳೊಳಗಾಗಿ ದಾನಿಯ ದೇಹದಲ್ಲಿ ಉತ್ಪತ್ತಿಯಾಗುತ್ತದೆ. ಅಂದರೆ ಬೃಹತ್ ಪ್ರಮಾಣದ ರಕ್ತವು ಕೆಲವೇ ಗಂಟೆಗಳೊಳಗಾಗಿ ದೇಹದಲ್ಲಿ ಉತ್ಪತ್ತಿಯಾಗುವುದರಿಂದ ಒಂದೇ ಸಮಯದಲ್ಲಿ ಹೆಚ್ಚು ಪ್ರಮಾಣದ ತಾಜಾ ರಕ್ತವನ್ನು ದೇಹವು ಪಡೆದುಕೊಂಡಂತಾಗುತ್ತದೆ.

ಪ್ರತಿಯೊಬ್ಬರೂ ತಮ್ಮ ಹುಟ್ಟುಹಬ್ಬಗಳನ್ನು, ತಮ್ಮೂರಿನ ಜಾತ್ರಾ, ಮಹೋತ್ಸವಗಳನ್ನು ಇಂತಹ ರಕ್ತದಾನ ಶಿಬಿರಗಳನ್ನ ಆಯೋಜಿಸುವುದರ ಮೂಲಕ ಹಮ್ಮಿಕೊಳ್ಳಬಹುದಾಗಿದೆ. ಪ್ರಾಥಮಿಕ ಹಂತದಿಂದಲೆ ಶಾಲಾ ಮಕ್ಕಳು ಮುಂದೆ ತಾನು ವಯಸ್ಕನಾದಾಗ ಖಂಡಿತವಾಗಿಯೂ ರಕ್ತದಾನದಲ್ಲಿ ಪಾಲ್ಗೊಳ್ಳುತ್ತೇನೆ ಹಾಗೂ ಬೇರೆಯವರು ಪಾಲ್ಗೊಳ್ಳುವಂತೆ ಪ್ರೇರೇಪಿಸುತ್ತೇನೆ ಎಂಬ ಆಶಯಗಳೊಂದಿಗೆ ಪಠ್ಯ ಚಟುವಟಿಕೆಗಳಲ್ಲಿ ತೊಡಗುವಂತೆ ನೀತಿಯನ್ನು ರೂಪಿಸಬಹುದಾಗಿದೆ. ನಮ್ಮ ದೇಶದ ಯಾವುದೇ ವ್ಯಕ್ತಿ ಅಗತ್ಯ ಪ್ರಮಾಣದ ರಕ್ತ ಲಭ್ಯವಾಗದಿರುವ ಕಾರಣದಿಂದಾಗಿ ಮರಣ ಹೊಂದದಂತೆ ನೋಡಿಕೊಳ್ಳುವ ಇಚ್ಛಾಶಕ್ತಿಯನ್ನು ತೋರ್ಪಡಿಸಬಹುದಾಗಿದೆ. ಅಷ್ಟಕ್ಕೂ ಪ್ರೇರಣಾಸ್ಫೂರ್ತಿದಾಯಕ ವಾತಾವರಣವನ್ನು ನಿರ್ಮಿಸಿದಲ್ಲಿ ರಕ್ತದಾನಕ್ಕೆ ಮುಂದಾಗುವ ಯುವಕರಿಗೇನು ಕಮ್ಮಿಯಿಲ್ಲ. ಬಾಲ್ಯದಿಂದಲೆ ನಾವುಗಳು ಕೂಡ ಸಮಾಜದ ಭಾಗ, ಸಮಾಜಕ್ಕಾಗಿ ನಾವು ಎಂಬ ಮನೋಭೂಮಿಕೆಯನ್ನು ಮೂಡಿಸಿಕೊಳ್ಳಬೇಕಾಗಿದೆ. ಇನ್ನು ಮುಂದಾದರೂ ನಾವುಗಳೆಲ್ಲರೂ ಸ್ವಯಂ ಪ್ರೇರಿತವಾಗಿ ರಕ್ತದಾನಗಳಲ್ಲಿ ಪಾಲ್ಗೊಳ್ಳೋಣ.